ಆ) ಪ್ರತಿದಿನ ಸರಾಸರಿ ೨೧.೧೭ ಲಕ್ಷ ಕಿ.ಮೀ.ಗಳ ಕಾರ್ಯಾಚರಣೆಯಾಗಿದೆ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಹನಗಳು ಡೀಸಲ್‌ನಿಂದ ಓಡಿಸಲ್ಪಡುತ್ತವೆ. ಇವುಗಳ ಸಾಧನೆ ಪ್ರತಿ ಲೀಟರಿಗೆ ಸರಾಸರಿ ೪–೩೮ ಕಿ.ಮೀ ಗಳು.

ಈ) ೧೯೮೬–೮೭ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೭೯–೭೦ ಲಕ್ಷ ರೂ.ಗಳ ನಷ್ಟವನ್ನು ಅನುಭವಿಸಿದೆ. ೧೯೮೭–೮೮ನೇ ಸಾಲಿನ ಲಾಭ / ನಷ್ಟಗಳು ಇನ್ನೂ ನಿರ್ಧಾರವಾಗಿಲ್ಲ.

ಶ್ರೀ ಜಿ. ರಾಜೂಗೌಡ.—೧೯೮೬–೮೭ರಲ್ಲಿ ೮ ಕೋಟಿ ರೂಪಾಯಿ ನಷ್ಟವನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸಿದೆ, ಈ ನಷ್ಟ ಆಗಿರತಕ್ಕದ್ದು ೧೯೮೫–೮೬ಕ್ಕಿಂತ ಶೇಕಡ ಎಷ್ಟು ಜಾಸ್ತಿಯಾಗಿದೆ ಅಥವಾ ಕಡಿಮೆಯಾಗಿದೆ ? ನಷ್ಟವನ್ನು ತಗ್ಗಿಸತಕ್ಕಂಥ ಕೆಲಸದಲ್ಲಿ ಸರ್ಕಾರ ಕೈಗೊಂಡಿರತಕ್ಕ ಮುಂಖ್ಯ ಕಾರಣವೇನೆಂಬುದನ್ನು ಮಾನ್ಯ ಸಚಿವರು ಹೇಳುತ್ತಾರೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—೧೯೮೬–೮೭ರಲ್ಲಿ ಆಗಿರತಕ್ಕ ನಷ್ಟ ೧೯೮೫–೮೬ಕ್ಕಿಂತ ಕಡಿಮೆಯಾಗಿದೆ. ಬರತಕ್ಕ ೧೯೮೭–೮೮ರಲ್ಲಿ ಈ ನಷ್ಟ ಇನ್ನೂ ಕಡಿಮೆಯಾಗುತ್ತದೆಂಬ ವಿಶ್ವಾಸ ನನಗಿದೆ. ಈ ನಷ್ಟವನ್ನು ಕಡಿಮೆ ಮಾಡಲು ಅನೇಕ ಕಾರ್ಯಕ್ರಮಗಳನ್ನು ಸಾರಿಗೆ ಸಂಸ್ಥೆಯವರು ಹಾಕಿಕೊಂಡಿದ್ದಾರೆ. ಡೀಸಲ್‌ನಲ್ಲಿ ಉಳಿತಾಯ ಮಾಡತಕ್ಕದ್ದು, ಟೈರ್‌ನಲ್ಲಿ ಉಳಿತಾಯ ಮಾಡತಕ್ಕದ್ದು ವಾಹನಗಳ ಯುಟಿಲೈಜೇಷನ್ ಹೆಚ್ಚು ಮಾಡತಕ್ಕದ್ದು. ಈ ರೀತಿ ಮೂರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದಷ್ಟು ನಷ್ಟವನ್ನು ಕಡಿಮೆ ಮಾಡಲು ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಜಿ. ರಾಜೂ ಗೌಡ.—ಈಗಿರತಕ್ಕ ವಾಹನಗಳ ಪ್ರಮಾಣಕ್ಕೆ ಅನುಗುಣವಾಗಿ ಸಿಬ್ಬಂದಿ ಇಲ್ಲ. ಇದು ಬಹಳ ಹೆಚ್ಚಿದೆ. ಈ ಸಿಬ್ಬಂದಿಯನ್ನು ಕಡಿಮೆ ಮಾಡಲು ವ್ಯವಸ್ಥೆ ಮಾಡಬೇಕು. ಈಗ ಇಲ್ಲಿ ಸಿಬ್ಬಂದಿ ಸಂಖ್ಯೆ ಜಾಸ್ತಿ ಇದೆ. ಆದ್ದರಿಂದ ನಷ್ಟ ಹೆಚ್ಚಾಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹೆಚ್ಚು ಸಿಬ್ಬಂದಿ ಇಲ್ಲ. ಪ್ರತಿ ಬಸ್ಸಿಗೆ ೭–೮ ಜನ ಸಿಬ್ಬಂದಿ ಇದೆ. ಇದನ್ನು ಹೆಚ್ಚು ಮಾಡದೆ ಅವಶ್ಯಕತೆಗೆ ಎಷ್ಟುಬೇಕೋ ಅಷ್ಟನ್ನು ಉಳಿಸಿಕೊಳ್ಳಲಿತ್ತಿದ್ದೇನೆ. ಹೆಚ್ಚು ಇದ್ದರೆ ಕಡಿಮೆ ಮಾಡಲು ಕ್ರಮಂತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ರಾಜೂಗೌಡ.—ಆಂಧ್ರ ಮತ್ತು ತಮಿಳುನಾಡಿನಲ್ಲಿ ವಾಹನಗಳ ಸಂಖ್ಯೆ ಮಂತ್ತು ಸಿಬ್ಬಂದಿ ಸಂಖ್ಯೆಯನ್ನು ಹೋಲಿಸಿ ನೋಡಿದಾಗ ಅಲ್ಲಿ ಸಮಗಿಂತಲೂ ಕಡಿಮೆ ಇದೆ. ೪–೫ ಜನ ಒಂದು ಬಸ್ಸಿಗಿದ್ದಾರೆ. ಇಲ್ಲಿ ೭–೮ ಜನ ಇದ್ದಾರೆ. ಆದ್ದರಿಂದ ಇಲ್ಲಿ ನಷ್ಟ ಹೆಚ್ಚಾಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದರ ಬಗ್ಗೆ ಯಾರೋ ತಪ್ಪು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದಾರೆ. ನಮ್ಮ ರಾಷ್ಟ್ರದಲ್ಲಿಯೇ ಬಸ್ಸುಗಳ ಸಂಖ್ಯೆ ಮಂತ್ತು ಅಲ್ಲಿರತಕ್ಕ ಕಾರ್ಮಿಕರ ಸಂಖ್ಯೆಯನ್ನು ಹೋಲಿಸಿ ನೋಡಿರೆ ಇದರ ಬಗ್ಗೆ ಗೊತ್ತಾಗುತ್ತದೆ. ರಾಷ್ಟ್ರದಲ್ಲಿ ಸಿಬ್ಬಂದಿ ಕಡಿಮೆ ಇರತಕ್ಕ ಸಂಸ್ಥೆಗಳಲ್ಲಿ ನಮ್ಮದೂ ಕೂಡ ಒಂದಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹಸಿರು ಹಾಗೂ ಹಳದಿ ರೇಷನ್ ಕಾರ್ಡುಗಳು

೧೬೬೧. ಶ್ರೀ ಸಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಬಡವರಿಗೆ ಪರಿಹಾರ ನೀಡಲು ಹಸಿರು ಮತ್ತು ಹಳದಿ ರೇಷನ್ ಕಾರ್ಡುಗಳನ್ನು ಕೊಟ್ಟು ಎಷ್ಟು ವರ್ಷಗಳಾದವು ?

ಆ) ನಗರ ಮತ್ತು ಮಹಾ ನಗರಗಳಲ್ಲಿ ಅಷ್ಟೇ ಪ್ರಮಾಣದ ಬಡತನದ ಬೇಗೆಯಿಂದ ನೊಂದವರು ಇದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಹಸಿರು ಮತ್ತು ಹಳದಿ ರೇಷನ್ ಕಾರ್ಡುಗಳನ್ನು ನಗರ ಮತ್ತು ಮಹಾ ನಗರಗಳಲ್ಲಿ ಕೊಡದಿರುವುದು ತಾರತಮ್ಯ ಮಾಡಿದಂತಾಗಿರುವುದಿಲ್ಲವೇ ?

ಈ) ಈ ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರ ಆದಷ್ಟು ಬೇಗನೆ ಕ್ರಮ ತೆಗೆದು ಕೊಳ್ಳುತ್ತದೆಯೇ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮಂತ್ರಿ, ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು).—

ಅ) ೨½ ವರ್ಷಗಳಾದವು.

ಆ) ಬಂದಿದೆ.

ಇ) ಹೌದು.

ಈ) ಪರಿಶೀಲಿಸಲಾಗುವುದು.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಎರಡೂವರೆವರ್ಷ ಗ್ರಾಮಾಂತರ ಜನಗಳಿಗೆ ಕಾರ್ಡ್‌ನ ಅನುಕೂಲ ಒದಗಿಸಿಕೊಟ್ಟ ಮೇಲೆ ಗ್ರೀನ್‌ಕಾರ್ಡ್, ಯಲ್ಲೋಕಾರ್ಡ್ ಕೊಡುವ ಅನುಕೂಲ ಕೊಟ್ಟಿದ್ದಾರೆ ಅಲ್ಲಿಂದೀಚೆಗೆ ನಗರ ಮತ್ತು ಮಹಾ ನಗರಗಳನ್ನು ಇದಕ್ಕೆ ಅನ್ವಯಿಸಬೇಕೆಂದು ಕೇಳಿಕೊಂಡಿದ್ದಾರೆ ಪ್ರತಿ ವರ್ಷ ಇದರ ಬಗ್ಗೆ ಎಷ್ಟು ಅರ್ಜಿಗಳು ಬಂದಿವೆ ? ಬಂದಂತಹ ಅರ್ಜಿಗಳನ್ನು ಪರಿಶೀಲಿಸಲಾಗಿದೆಯೇ? ಅರ್ಜಿಗಳನ್ನು ಪರಿಶೀಲಿಸಿ ಇದಕ್ಕೆ ಏನಾದರೂ ಒಂದು ಕಾನೆ ಕಾಣಿಸುವುದಕ್ಕೆ ಸಾಧ್ಯವಾಗಿರುತ್ತದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಈಗಿರತಕ್ಕ ೧೪೯ ಪಟ್ಟಣ ಪ್ರದೇಶಗಳಲ್ಲಿ ಪಡಿತರ ವ್ಯವಸ್ಥೆಯಲ್ಲಿ ಆಹಾರಧಾನ್ಯ ಮತ್ತಿತರ ವಸ್ತುಗಳನ್ನು ಸರಬರಾಜು ಮಾಡಲಾಗುತ್ತಿದೆ. ಇತ್ತೀಚೆಗೆ ೭೧ ಪಟ್ಟಣಗಳು ಮಂಡಳಗಳಾಗಿ ಪರಿವರ್ತನೆಯಾದ ಮೇಲೆ ಅಲ್ಲಿ ಹಸಿರು ಕಾರ್ಡ್‌ಗಳನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ೨೦ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕ ಪಟ್ಟಣದಲ್ಲಿ ಹಸಿರು ಕಾರ್ಡ್‌ಗಳನ್ನು ಕೊಡಬೇಕೆಂದು ಅರ್ಜಿಗಳು ಬರುತ್ತಿರುವುದರಿಂದ ಅದನ್ನು ಯಾವ ರೀತಿ ಮಾಡಬೇಕೆನ್ನುವ ಬಗ್ಗೆ ಒಂದು ಸರ್ವೆ ಮಾಡುತ್ತಿದ್ದೇವೆ. ಸರ್ವೆ ಕೆಲಸ ಕಂಪ್ಲೀಟ್ ಆದಮೇಲೆ ಒಂದು ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಪ್ರವಾಸ ಕೈಗೊಂಡಾಗ ನೇಕಾರ ಸಮಾಜದವರು ನಮ್ಮಲ್ಲಿ ೩೫೦೦ ರೂಪಾಯಿಗಳಿಗಿಂತಕಡಿಮೆಆದಾಯ ಇರುವ ಪರಿಗೆ ಹಸಿರು ಕಾರ್ಡ್‌ಗಳನ್ನು ಕೊಡಬೇಕೆಂದು ಬಹಳ ಒತ್ತಾಯ ಮಾಡಿದ್ದಾರೆ. ಸರ್ವೆ ಕೆಲಸ ಮುಗಿದ ಮೇಲೆ ಸರ್ಕಾರ ಆದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುತ್ತದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.— ದಯವಿಟ್ಟು ಮಾನ್ಯ ಮಂತ್ರಿಗಳು ಎಷ್ಟು ದಿವಸಗಳಲ್ಲಿ ಅಥವಾ ಎಷ್ಟು ತಿಂಗಳಲ್ಲಿ ಇದನ್ನು ಜಾರಿಗೆ ಕೊಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಆದಷ್ಟು ಶೀಘ್ರ ಜಾರಿಗೆ ಕೊಡುತ್ತೇವೆಂದು ಹೇಳಿ.

ಶ್ರೀ ಬಸವರಾಜ್‌ಪಾಟೀಲ್ ಅನ್ವರಿ.—ನಾಳೆ ಹೇಗಿದ್ದರೂ ನನ್ನ ಡಿಮಾಂಡ್ ಬರುತ್ತದೆ. ಡಿಮಾಂಡ್ ಮೇಲೆ ಮಾತನಾಡುವಾಗ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟರೆ ಆ ರೀತಿ ಮಾಡಲಾಗುವುದು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಹುಬ್ಬಳ್ಳಿಯಲ್ಲಿ ಉಚ್ಚನ್ಯಾಯಾಲಯ ವಿಭಾಗದ ಪೀಠ

೧೮೮೮. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮಾಂತರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರನ್ನು ಬಿಟ್ಟು ರಾಜ್ಯದ ಬೇರೆಡೆ ಉಚ್ಚ ನ್ಯಾಯಾಲಯದ ವಿಭಾಗ ಪೀಠ ಪ್ರಾರಂಭಿಸುವ ವಿಚಾರ ರಾಜ್ಯ ಸರ್ಕಾರದ ಮುಂದಿದೆಯೇ ?